# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/147/2015-16

ದಿನಾಂಕ :30/08/ 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಕೆ.ಬರ್ಮಾನಾಯ್ಕ ತಂದೆ ಲೇಟ್ ಕೊಲಿ ತಾಯಪ್ಪ ಎಂ.ಸೂಗೂರು ಗ್ರಾಮ, ಸಿರುಗುಪ್ಪ ತಾಲೂಕು (ಶ್ರೀಎಂ.ಯರ್ರಿಸ್ವಾಮಿ, ಮತ್ತು ಜಿ.ಪಂಪಾಪತಿ, ವಕೀಲರು, ಬಳ್ಳಾರಿ) | 1.ತಹಶೀಲ್ದಾರರು,ಸಿರುಗುಪ್ಪ. |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಎಂ.ಸೂಗೂರು | 24/ಬಿ/2 | 4.77 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ಕರೂರು ಇವರ ಎಂ.ಆರ್.ನಂ.10/2001-02 ದಿನಾಂಕ:03.07.2002 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 01.12.2015,29.03.2016,30.08.2016,ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಎಂ.ಸೂಗೂರು ಗ್ರಾಮದ ಸ.ನಂ.24/ಬಿ/2 ವಿಸ್ತೀರ್ಣ:4.77 ಎಕರೆ ಜಮೀನನ್ನುಶ್ರೀಮತಿ ಗಂಗಮ್ಮ ಗಂಡ ಲಿಂಗನಗೌಡ,ಇವರಿಂದ ಖರೀಸಿದ್ದು,ಸದರಿ ಪಹಣಿಯಲ್ಲಿ ವಿಸ್ತೀರ್ಣ ಕಡಿಮೆಯಾಗಿರುವುದರಿಂದ ಪಹಣಿಯಲ್ಲಿ ವಿಸ್ತೀರ್ಣ ತಿದ್ದುಪಡಿ ಮಾಡಿಕೊಡಲು, ಕೋರಿರುತ್ತಾರೆ.

ಪ್ರಕರಣದಲ್ಲಿನ ವಾದಿಯ ಮೇಲ್ಮನವಿ ಹಾಗೂ ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ.

1.ಸದರಿ ಸ.ನಂ.24/ಬಿ/2 ರ ಆಕಾರ್ ಬಂದ್ ಪ್ರತಿ,

2.ಪ್ರಸ್ತುತ ಭೂಮಿ ತಂತ್ರಾಂಶದಲ್ಲಿನ RTC Lerf(Screen shot) ತಾಳೆನೋಡಿ,ಅಗತ್ಯ ತಿದ್ದುಪಡಿ ಪ್ರಾಸ್ತವನೆಯನ್ನು ಈ ಆದೇಶ ತಲುಪಿದ 7 ದಿನದೊಳಗಾಗಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸುವ ಈ ಕೆಳಕಂಡ ಆದೇಶ

ಮುಂದಿನ ಪುಟಕ್ಕೆ.....

:: ಆದೇಶ ::

**ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಎಂ.ಸೂಗೂರು ಗ್ರಾಮದ 24/ಬಿ/2 ವಿಸ್ತೀರ್ಣ:4.77 ಎಕರೆ ಜಮೀನಿಗೆ ಸಂಬಂಧಿಸಿದಂತೆ ಆಕಾರ್ ಬಂದ್ ಪ್ರತಿ ಹಾಗೂ ಭೂಮಿ ತಂತ್ರಾಂಶದಲ್ಲಿನ RTC Lerf(Screen shot) ತಾಳೆನೋಡಿ,ಅಗತ್ಯ ತಿದ್ದುಪಡಿ ಪ್ರಾಸ್ತವನೆಯನ್ನು ಈ ಆದೇಶ ತಲುಪಿದ 7 ದಿನದೊಳಗಾಗಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು, ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 30.08.2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಸಹಾಯಕ ಆಯುಕ್ತರು,
ಬಳ್ಳಾರಿ